## ವಿಶಿಷ್ಟ ಪದಗಳು

ಅಕೃತ್ರಿಮ ಜಿನಾಲಯ : ಸಹಜವಾಗಿ ಪ್ರಕೃತಿಯಿಂದ ನಿರ್ಮಾಣಗೊಂಡ ಜಿನಾಲಯಗಳು ಮೂರು ಲೋಕದಲ್ಲೂ ಅಲ್ಲಲ್ಲೇ ಜಿನಾಲಯಗಳಿವೆ. ಇಲ್ಲಿಗೆ ಕೇವಲ ದೇವತೆಗಳು ಮಾತ್ರ ಹೋಗಿ ಪೂಜೆಯೆಸಗುವರು.

ಅನುಮೋದನಪುಣ್ಯ : ಪುಣ್ಯಕಾರ್ಯಕ್ಕೆ ಒಪ್ಪಿಗೆಯಿತ್ತವರಿಗೆಲ್ಲ ಪುಣ್ಯ ಪ್ರಪ್ತಿಯಾಗುವುದು. ಅದಕ್ಕೆ ಅನುಮೋದನ ಪುಣ್ಯ ಎನ್ನುವರು.

ಅಪರಾಜಿತ : ಪೂರ್ವ ವಿದೇಹದ ಅಜಿತವೀರ್ಯ ತೀರ್ಥಂಕರ.

ಅರಹಂತ : ಘಾತಿಕರ್ಮಗಳನ್ನು ನಾಶಮಾಡಿದ ಚೇತನಕ್ಕೆ ಅನಂತರಿಸಿ ಪ್ರಾಪ್ತಿಯಾಗಿ ಪರಮಾತ್ಮ ಪ್ರಕಾಶನವಗುವುದು.ಇಂಥ ಪರಮಾತ್ಮನನ್ನು ಅರಹಂತ,ಜಿನ ಕೇವಲಿ, ಸರ್ವಜ್ಞ ಎಂದು ಕರೆವರು. ಕೇವಲ ತಂತಮ್ಮ ಮುಕ್ತಿಗೆ ಹೆಣಗಾಡಿ ದವರನ್ನು ಸಾಮಾನ್ಯ ಕೇವಲಿಗಳೆಂದೂ ,ಲೋಕದ ಮುಕ್ತಿಗೂ ವಿಶ್ವಾನುಕಂಪದಿಂದ ಪರಿತಪಿಸಿದ ಪರಮಾತ್ಮರೇ ! ಇಂಥವರ ದೇಹ ಬೆವರಿಲ್ಲದೆ. ರೋಗುಜಿನಗಳಿಲ್ಲದೆ ಪರಮಪಾವನವಾಗಿ ಕಂಪಿನ ಕಡಲಾಗಿ ಕಾಂತಿಯ ಪುಂಜವಾಗಿ ತೊಳಗುವುದು .ಇವರ ಕಾಯಕ್ಕೆ ಪರಮೌದಾರಿಕ ಕಾಯವೆನ್ನುವರು.

ಆರ್ಯಿಕೆ : ಜೈನ ಶ್ರಾವಿಕೆ ಜೀವನದಲ್ಲಿ ಪರಿವ್ರಾಜಿಕೆಯಾಗಿ ಆತ್ಮ ಚಿಂತನೆಯಲ್ಲಿ ಮುಳುಗಿದ ಚೇತನವನ್ನು ಆರ್ಯಿಕೆಯನ್ನುವರು.

ಈಶಾನಕಲ್ಪ :ಊರ್ಧ್ವಲೋಕದಲ್ಲಿ ಕೆಳಗಿಂದ ಮೇಲಕ್ಕೆ ಜೋಡಿ ಜೋಡಿಯಾಗಿ ಎಂಟು ಜೊತೆ ಅಂದರೆ ಹದಿನಾರು ಕಲ್ಪಗಳಿವೆ. ಮೊದಲನೆ ಪಂಕ್ತಿಯಲ್ಲಿ ದಕ್ಷಿಣಕ್ಕೆ ಹಬ್ಬಿರುವ ಸ್ವರ್ಗಕ್ಕೆ ಈಶಾನಕಲ್ಪವೆನ್ನುವರು.

ಊರ್ಜಯಂತ : ಗುಜರಾತ್ ಪ್ರಾಂತದ ಜುನಾಗಡಕ್ಕೆ ಮೂರುಮೈಲಿ ದೂರದಲ್ಲಿ ಈ ಪರ್ವತವಿದೆ. ಇದಕ್ಕೆ 'ಗಿರ್ ನಾರ್' ಎಂಬ ಹೆಸರೂ ಉಂಟು. ಇಲ್ಲಿ ಇಪ್ಪತ್ತೆರಡನೆಯ ತೀರ್ಥಂಕರ ನೇಮಿನಾಥ ನಿರ್ವಾಣ ಪಡೆದನು.

ಕರ್ಮ : ಇದು ಅಜೀವ ದ್ರವ್ಯ, ಜೀವಿಯ ಕಾಯವಚನ ಹಾಗು ಮನೋಯೋಗಗಳ ಮುಖೇನ ಕರ್ಮಾಣುಗಳು ಜೀವದ ಕಡೆ ಹರಿದು ತಳವೂರುವುವು. ಜೀವಿಯ ಸೃಷ್ಟಿ ಸ್ಥಿತಿ ಹಾಗು ಲಯಲೀಲೆಯಲ್ಲಿ ಕರ್ಮದ ಕೈವಾಡ ಪೂರ್ಣವಾಗಿದೆ.

ಕಷಾಯಸಲ್ಲೇಖನ : ಸಲ್ಲೇಖನ ನೋಡುವುದು.

ಕುಂದಕುಂದ : ಕ್ರಿ.ಶ. ೧ನೆಯ ಶತಮಾನದಲ್ಲಿದ್ದ ಜೈನಾಚರ್ಯರು. ಪ್ರವಚನಸಾರ. ನಿಯಮಸಾರ, ಸಮಯಸಾರ ,ಪಂಚಸ್ತಿಕಾಯ ಎಂಬ ದಾರ್ಶನಿಕ ಗ್ರಂಥಗಳನ್ನು ಇವರು ರಚಿಸಿರುವರು.

ಕೈಲಾಸಗಿರಿ :ಮೊದಲನೆಯ ತೀರ್ಥಂಕರ ಆದಿದೇವ ನಿರ್ವಾಣ ಪಡೆದ ಪಾವನ ಕ್ಷೇತ್ರ. ಗಂಗಾತೀರದಲ್ಲಿದೆಯೆಂದು ಕೆಲವರೂ, ಎಲ್ಲಿದೆಯೋ ಗೊತ್ತಿಲ್ಲವೆಂದು ಕೆಲವರೂ ಹೇಳುವರು.

ಗುಣಸ್ಥಾನ : ಜೈನಸಾಧನಾ ಮಾರ್ಗದ ಮುಕ್ತಿಪಥದಲ್ಲಿ ೧೪ ಹಂತ (ಗುಣಸ್ಥಾನ)ಗಳಿವೆ.

ಚರಿಗೆ :ಜಿನಮುನಿ ಆಹಾರಕ್ಕಾಗಿ ಶ್ರಾವಕರನ್ನು ಅರಸಿಕೊಂಡು ಹೊರಡುವುದಕ್ಕೆ ಚರಿಗೆ ಎನ್ನುವರು.

ಚಂಪಾಪುರಿ : ಬಿಹಾರ ಪ್ರಾಂತದ ಬಾಗಲ್‌ಪುರದ ಬಳಿ ಚಂಪಾಪುರವಿದೆ. ಹನ್ನೆರಡನೆಯ ತೀರ್ಥಂಕರ ವಾಸುಪೂಜ್ಯ ಹುಟ್ಟಿದ ಹಾಗು ನಿರ್ವಾಣ ಪಡೆದ ಪವಿತ್ರ ಕ್ಷೇತ್ರ.

ಜನ್ಮಾಭಿಷೇಕ : ಪಂಚಕಲ್ಯಾಣ ನೋಡುವುದು.

ಜಿನೇಂದ್ರ : ಅರಹಂತ ನೋಡುವುದು.

ಜಯಧವಳ : ಕ್ರಿ.ಶ. ಎರಡನೆಯ ಶತಮಾನದಲ್ಲಿ ಗುಣಧರ ಮುನಿ ಜೈನಧರ್ಮವನ್ನು ೧೮೦ ಗಾಹೆಗಳಲ್ಲಿ ಕಷಾಯಪ್ರಾಭೃತವೆಂದು ಸಂಗ್ರಹಿಸಿದರು. ಇದರ ಮೇಲೆ ಗುರುಶಿಷ್ಯರಾದ ವೀರಸೇನಾಚಾರ್ಯ ಹಾಗು ಜಿನಸೇನಾಚಾರ್ಯರು (ಕ್ರಿ.ಶ. ೮೧೪-೮೭೭) ಕ್ರಮವಾಗಿ ೨೦ ಸಹಸ್ರ ಮತ್ತು ೪೦ ಸಹಸ್ರ ಶ್ಲೋಕದಲ್ಲಿ ವ್ಯಾಖ್ಯಾನ ಬರೆದರು. ಈ ಬೃಹದ್ ಕೃತಿಗೆ ಜಯಧವಳ ಎನ್ನುವರು.

ತೀರ್ಥಂಕರ : ಅರಹಂತ ನೋಡುವುದು.

ದಿವ್ಯಧ್ವನಿ : ಸಮವಸರಣ ನೋಡುವುದು.

ಧವಳ : ಕ್ರಿ.ಶ. ೨ನೆಯ ಶತಮಾನದಲ್ಲಿ ಭೂತಬಲಿ ಹಾಗು ಪುಷ್ಪದಂತ ಆಚಾರ್ಯರು ಕಲೆತು ಆರುನೂರು ಸೂತ್ರಗಳಲ್ಲಿ ಜಿನಾಗಮವನ್ನು ಸಂಗ್ರಹಿಸಿದರು. ಇದಕ್ಕೆ ಷಟ್ಖಂಡಾಗಮ ಎನ್ನುವರು. ಇದರಮೇಲೆ ವೀರಸೇನಾಚಾರ್ಯರು (ಕ್ರಿ.ಶ. ೮೧೪ ೮೭೨) ೭೨ ಸಹಸ್ರ ಶ್ಲೋಕದ ಭಾಷ್ಯ ಬರೆದರು. ಇದಕ್ಕೆ ಧವಳ ಎನ್ನುವರು.

ಪಂಚಕಲ್ಯಾಣ : ತೀರ್ಥಂಕರನಾಗಲಿರುವ ಚೇತನ (ಸ್ವರ್ಗದಿಂದ ಬುವಿಗಿಳಿದು) ತಾಯಗರ್ಭಕ್ಕೆ ಬರಲು ಆರುತಿಂಗಳಿರುವಾಗ ,ಜನಿಸಿದಾಗ, ವೈರಾಗ್ಯ ಗೊಂಡಾಗ ,ಕೇವಲಜ್ಞಾನ ಪಡೆದು ಜಿಮೇಂದ್ರನಾದಾಗ, ಅಘಾತಿಕರ್ಮ ಕಳೆದು ಕೊಂಡು ಸಿದ್ಧನಾದಾಗ ಈ ಐದು ಶುಭಸನ್ನಿವೇಶಗಳಲ್ಲೂ ಚತುರ್ನಿಕಾಯಾಮರರು ಬುವಿಗೆ ಬಂದು ಭಗವದಾವೇಶದಿಂದ ಉತ್ಸವವನಾಚರಿಸುವರು. ಇದಕ್ಕೆ ಪಂಚಕಲ್ಯಾಣವೆನ್ನುವರು.

ಪಂಚನಮಸ್ಕಾರ : ಅನಂತಸಿರಿಲೋಲನಾದ ಅರಹಂತ, ನಿರುಪಾಧಿಕ ಸುಖನಾಗಿ, ನಿರಾಕಾರನಾಗಿ ಸಿದ್ಧಲೋಕದಲ್ಲಿ ಓಲಾಡುವ ಸಿದ್ಧ ,ಸದಾಚಾರ ಸಂಪನ್ನನಾಗಿ ಪರಮಾತ್ಮ ಪ್ರಕಾಶನಕ್ಕೆ ಹಂಬಲಿಸುತ್ತ ಶಿಷ್ಯರಲ್ಲೂ ಭಕ್ತಿಯನ್ನು ಉದ್ದೀಪನಗೊಳಿಸುವ ದಿಗಂಬರಾಚಾರ್ರ, ಜೈನಾಗಮಗಳನ್ನು ಜೀರ್ಣಿಸಿಕೊಂಡು ಭವ್ಯರಿಗೆ ಉಪದೇಶಿಸುವ ದಿಗಂಬರ ಯತಿ (ಉಪಾಧ್ಯಾಯ ) ಕೇವಲ ತನ್ನ ಉದ್ಧಾರ ಕ್ಕಾಗಿ ಹಂಬಲಿಸುವ ದಿಗಂಬರಮುನಿ (ಸಾಧು)– ಈ ಐದರನ್ನೂ ನೆನೆದು ಇವರ ದೈವಿಕ ಗುಣಗಾನ ಮಾಡುವುದಕ್ಕೆ ಪಂಚಮನಸ್ಕಾರವೆನ್ನುವರು. ಇದನ್ನು ಜೈನಗಾಯತ್ರಿ ಎನ್ನಬಹುದು.

ಪಂಚಪರಮೇಷ್ಠಿ : ಅರಹಂತ, ಸಿದ್ಧ ,ಆಚಾರ್ಯ, ಉಪಾಧ್ಯಾಯ ಮತ್ತು ಸಾಧು ಇವರನ್ನು ಪಂಚಪರಮೇಷ್ಠಿ ಎನ್ನುವರು. ಪಂಚನಮಸ್ಕಾರ ನೋಡಿ.

ಪರೀಷಹ : ಆತ್ಮಾನುಸಂಧಾನದಲ್ಲಿ ತೊಡಗಿದ ಯತಿಗಳು ಸಹಿಸಬೇಕಾದ ಎರಡು ತೊಡರುಗಳು.

ಪರಮೌದಾರಿಕಕಾಯ :ಅರಹಂತ ದೇಹ ೧೦೦೮ ಸಲ್ಲಕ್ಷಣಗಳಿಂದ ಕೂಡಿ ರಾರಾಜಿಸುವುದು .ಇದಕ್ಕೆ ಪರಮೌದಾರಿಕಕಾಯ ಎನ್ನುವರು. ಅರಹಂತ ನೋಡಬೇಕು.

ಪಾವಾಪುರಿ : ಮಹಾವೀರ ತೀರ್ಥಂಕರ ನಿರ್ವಾಣವಾದ ಪವಿತ್ರ ಕ್ಷೇತ್ರ. ಬಿಹಾರ ಪ್ರಾಂತದ, ಬಿಹಾರಷರೀಫ್ ವಿಭಾಗದಲ್ಲಿ ಬಿಹಾರ ನಗರದಿಂದ ದಕ್ಷಿಣಕ್ಕೆ ಒಂಬತ್ತು ಮೈಲಿ ದೂರದಲ್ಲಿದೆ.

ಪಿಂಚ : ಜೈನಮುನಿಗಳು ನವಿಲುಕುಚ್ಚನು ಕೈಯಲ್ಲಿ ಹಿಡಿದಿರುತ್ತಾರೆ.ತಾವು ಕೂರುವ ಜಾಗವನ್ನು ಸೂಕ್ಷ್ಮಕ್ರಿಮಿಗಳಿಗೆ ಅಪಾಯವಾಗದಂತೆ ಶುಚಿಗೊಳಿಸಲು ಇದನ್ನು ಉಪಯೋಗಿಸುವರು.

ಫ್ಯೂಜಿಯಾಮ : ಜಪಾನಿನ ಅಗ್ನಿಪರ್ವತ.

ಬಲದೇವ :ಜೈನಮಹಾಪುರುಷರಲ್ಲಿ ಒಂಬತ್ತು ಜನ ಬಲದೇವರಿದ್ದಾರೆ.

ಬಂಕಾಪುರ : ಧಾರವಾಡ ಜಿಲ್ಲೆಯಲ್ಲಿರುವ ಒಂದು ಗ್ರಾಮ.

ರತ್ನತ್ರಯ : ತೀರ್ಥಂಕರ ಧರ್ಮವಾದ ಅಹಿಂಸಾಧರ್ಮವನ್ನು ಪೂರ್ಣವಾಗಿ ನಂಬುವುದು, ವಿವೇಚಿಸುವುದು, ಬಾಳಿನಲ್ಲಿ ಅಳವಡಿಸಿಕೊಳ್ಳುವುದು ಇವಕ್ಕೆ ಕ್ರಮವಾಗಿ ಸಮ್ಯಗ್ ದರ್ಶನ, ಸಮ್ಯಗ್‌ಜ್ಞಾನ ಸಮ್ಯಗ್ ಚಾರಿತ್ರ ಎನ್ನುವರು. ಈ ಮೂರು ಸೇರಿ ರತ್ನತ್ರಯವಾಗುವುದು.

ಲಕ್ಕಂಡಿ : ಧಾರವಾಡ ಜಿಲ್ಲೆಯಲ್ಲಿ ಗದುಗಿನ ಸಮೀಪದಲ್ಲಿರುವ ಒಂದು ಗ್ರಾಮ.

ಲೋಚು : ಜೈನಮುನಿ ತಲೆ ಹಾಗು ಮುಖದ ಕೂದಲನ್ನು ಆಗಾಗ ತಮ್ಮ ಕೈಯಾರೆ ಕಿತ್ತುಹಾಕುವರು. ಈ ಕಾರ್ಯಕ್ಕೆ ಭಕ್ತಾದಿಗಳೂ ನೆರವಾಗುವರು. ಇದಕ್ಕೆ ಲೋಚು ಎನ್ನುವರು.

ವಾಸುದೇವ : ಜೈನರ ೬೩ ಜನ ಮಹಾಪುರುಷರಲ್ಲಿ ಒಂಬತ್ತು ಜನ ವಾಸುದೇವರಿದ್ದಾರೆ. ಕೃಷ್ಣ ,ಲಕ್ಷ್ಮಣ ಇವರು ವಾಸುದೇವರು.

ವಿದೇಹಕ್ಷೇತ್ರ : ಜಂಬುದ್ವೀಪದ ಸಪ್ತಕ್ಷೇತ್ರಗಳಲ್ಲಿ ನಲ್ಕನೆಯ ಕ್ಷೇತ್ರವೇ ವಿದೇಹ. ಎಲ್ಲ ಕಾಲದಲ್ಲೂ ಇಲ್ಲಿ ತೀರ್ಥಂಕರರಿರುತ್ತಾರೆ.

ವಿಪುಲಾದ್ರಿ : ಬಿಹಾರಪ್ರಾಂತದ ರಾಜಗೃಹದಲ್ಲಿರುವ ಒಂದು ಬೆಟ್ಟ.

ಶ್ರಾವಕಶ್ರಾವಿಕೆ : ಧರ್ಮಾನುರಾಗಿಗಳಾದ ಜೈನಗೃಹಸ್ಥರು. ಗಂಡಸರು, ಶ್ರಾವಕರು. ಹೆಂಗಸರು ಶ್ರಾವಿಕೆಯರು. ಶ್ರಾವಕ ಅವಸ್ಥೆಯಲ್ಲಿ ಹನ್ನೊಂದು ನೆಲೆಗಳಿವೆ. ಕೊನೆಕೊನೆ ಅವಸ್ಥೆಗಳು ಬ್ರಹ್ಮಚರ್ಯದಿಂದ ಕೂಡಿ ಸನ್ಯಾಸ ಜೀವನಕ್ಕೆ ತೀರ ಹತ್ತಿರವಾಗಿವೆ.

ಶ್ರೇಣಿಕ : ಕ್ರಿ. ಪೂ. ೬ನೆಯ ಶತಮಾನದಲ್ಲಿ ಮಗಧಸಾಮ್ರಾಜ್ಯದ ಸಾಮ್ರಾಟನಾಗಿದ್ದನು. ಈತನಿಗೆ ಬಿಂಬಸಾರ ಎಂಬ ಇನ್ನೊಂದು ಹೆಸರೂ ಉಂಟು.

ಸಮಯಸಾರ : ಕುಂದಕುಂದ ನೋಡುವುದು.

ಸಮವಸರಣ : ಘಾತಿಕರ್ಮವನ್ನು ಧ್ವಂಸಮಾಡಿ ಕೇವಲಜ್ಞಾನ ಪಡೆದ ತೀರ್ಥಂಕರನಿಗೆ ದೇವತೆಗಳು ಸತ್ಕರಿಸಲು ಅಂಬರದಲ್ಲಿ ತೇಲಾಡುವ ದೈವಕಲಾ ಪ್ರಪಂಚವನ್ನು ಸೃಷ್ಟಿಸಿ ಆತನನ್ನು ಆಹ್ವಾನಿಸುವರು. ಎಷ್ಟೇ ಭವ್ಯಾತ್ಮರು ಅಲ್ಲಿ ಸೇರಿದರೂ ಇನ್ನೂ ಜಾಗ ಉಳಿಯುವುದು. ತೀರ್ಥಂಕರ ಸಮವಸರಣದಲ್ಲಿ ಕುಳಿತು ಬೋಧಿಸುವನು. ತೀರ್ಥಂಕರ ವಾಣಿಗೆ ದಿವ್ಯಧ್ವನಿ ಎನ್ನುವರು.

ಸಮಾಧಿಮರಣ : ಶುಭಪರಿಣಾಮದಲ್ಲಿ ಸಾವನ್ನಪ್ಪಿದರೆ ಅದು ಸಮಾಧಿ ಮರಣ ಎನಿಸುವುದು.

ಸಮ್ಮೇದಶಿಖರ : ಬಿಹಾರ ಪ್ರಾಂತದ ಹಜಾರಿಬಾಗ್ ಜಿಲ್ಲೆಯಲ್ಲಿ ಈ ಬೆಟ್ಟವಿದೆ. ೪೪೮೮ ಅಡಿ ಎತ್ತರವಾಗಿದೆ. ಈ ಪರ್ವತದಲ್ಲಿ ಜೈನತೀರ್ಥಂಕರರಲ್ಲಿ ಇಪ್ಪತ್ತು ಜನ ನಿರ್ವಾಣವಾಗಿರುವರು.

ಸಾಮಾಯಿಕ : ಮೂರು ಸಂಜೆಯಲ್ಲಿ ಆತ್ಮಧ್ಯಾನ ಮಾಡುವುದಕ್ಕೆ ಸಾಮಾಯಿಕ ಎನ್ನುವರು.

ಸಲ್ಲೇಖನ : ಜೈನ ಸಾಧಕರು ಮುಪ್ಪಡರಿ ದೇಹ ಶಿಥಿಲಗೊಂಡು ಸಾಧನೆಗೆ ಅನರ್ಹ ವಾದಾಗ ಹಾಗು ವಾಸಿಯಾಗದ ರೋಗಕ್ಕೆ ತುತ್ತಾದಾಗ ಆಮರಣಾಂತ ಉಪವಾಸ ಆಚರಿಸುವರು. ಇದಕ್ಕೆ ಸಲ್ಲೇಖನ ಎನ್ನುವರು. ಅಂತರಂಗದ ರಾಗದ್ವೇಷವನ್ನು ಕುಗ್ಗಿಸುವುದಕ್ಕೆ ಕಷಾಯ ಸಲ್ಲೇಖನವೆಂದೂ ಆಹಾರ ತೊರೆದು ದೇಹವನ್ನು ಜೀರ್ಣಗೊಳಿಸುವುದಕ್ಕೆ ಕಾಯಸಲ್ಲೇಖನವೆಂದೂ ಹೆಸರು.

ಸಿದ್ಧ : ಪಂಚನಮಸ್ಕಾರ ಅಥವ ಪಂಚಪರಮೇಷ್ಠಿ ನೋಡುವುದು.

ಸಿದ್ಧಲೋಕ :ಪರಿಪೂರ್ಣವಾಗಿ ಮುಕ್ತರಾಗಿ ಸಿದ್ಧರೆನಿಸಿದವರು ನಿರಾಕಾರರಾಗಿ ವಾಸಿಸುವ ಲೋಕ, ಜೈನತ್ರಿಲೋಕದಲ್ಲಿ ತುಟ್ಟತುದಿಯಲ್ಲಿ ಈ ಲೋಕವಿದೆ. ನಿರುಪಾಧಿಕರೂ. ನಿಶ್ಚಿಂತರೂ ಆದ ಚೇತನಗಳು ಇಲ್ಲಿ ಅನಂತಕಾಲ ಅನಂತ ಇಸಿರಿಯಲ್ಲಿ ಓಲಾಡುವರು.

ಹಂಸೋಪಾಸನೆ : ಆತ್ಮಧ್ಯಾನ.